

# ಸೆಲೆಬ್ರಿಟಿ ಭ್ರಮೆ ನನಗಿಲ್ಲ

**ದೀಪಾ**

ಝೀ ಕನ್ನಡದ 'ಸುಬ್ಬಲಕ್ಷ್ಮಿ ಸಂಸಾರ'ದ ಸುಬ್ಬಲಕ್ಷ್ಮಿ

★ *ಸಮಯದ ಹೊಂದಾಣಿಕೆಯನ್ನು ಹೇಗೆ ಮಾಡಿಕೊಳ್ಳುತ್ತೀರಿ?*

ಇದಕ್ಕೆ ಎಲ್ಲರ ಸಹಕಾರವೇ ಕಾರಣ. ನನ್ನ ಕುಟುಂಬದ ಬೆಂಬಲ ಮತ್ತು ಪ್ರೋತ್ಸಾಹವನ್ನು ಮರೆಯಲು ಆಗುವುದಿಲ್ಲ. ಮದುವೆಯಾಗಿ ಒಂದು ವರ್ಷವೂ ತುಂಬಿಲ್ಲ. ನನ್ನ ಪತಿ ಭರತ ನಾಗೇಂದ್ರ ಎಷ್ಟೋ ಸಂದರ್ಭದಲ್ಲಿ ಚಿತ್ರೀಕರಣದ ಸ್ಥಳದಲ್ಲಿ ನನಗಾಗಿ ಕಾದು ರಾತ್ರಿ ಕರೆದುಕೊಂಡುಬರುತ್ತಾರೆ. ಮನೆಯಲ್ಲಿ ಅತ್ತೆ ಬೆಳಿಗ್ಗೆ 5ಕ್ಕೆ ಎದ್ದು ತಿಂಡಿ ಮಾಡಿಕೊಡುವ ಜೊತೆಗೆ ಬುತ್ತಿಯನ್ನು ಕಟ್ಟಿ ಕೊಡುತ್ತಾರೆ. ನನಗೆ ತಿಂಗಳಲ್ಲಿ 10 ದಿನ ಶೂಟಿಂಗ್ ಇರುತ್ತದೆ. ಆಗ ಬೆಳಿಗ್ಗೆ 6ಕ್ಕೆ ಮನೆ ಬಿಡುತ್ತೇನೆ. ಮತ್ತೆ ಮನೆ ಸೇರುವುದು ರಾತ್ರಿ 10ರಿಂದ 11 ಆಗುತ್ತದೆ. ಐದು ದಿನ ಡಬ್ಬಿಂಗ್ ಇರುತ್ತದೆ. ಆಗ ಬೆಳಿಗ್ಗೆ 9ರಿಂದ ಸಂಜೆ 5ರತನಕ ಕೆಲಸ ಮಾಡಬೇಕಾಗುತ್ತದೆ. ಉಳಿದ ದಿನಗಳ ಪೂರ್ಣ ಸಮಯ ನನಗೆ ಮತ್ತು ನನ್ನ ಕುಟುಂಬಕ್ಕೆ ಮೀಸಲು.

★ *ಸೆಲೆಬ್ರಿಟಿಯ ಮಿಂಚು ಬೇಗ ಮರೆಯಾಗುತ್ತದೆ ಎನ್ನಿಸುತ್ತಾ?*

ಹೊಸ ನೀರು ಪ್ರವಾಹದಂತೆ ಬಂದಾಗ ಹಳೆ ನೀರು ಕೊಚ್ಚಿ ಹೋಗಲೇ ಬೇಕು. ಇದು ನಿಸರ್ಗ ಸಹಜ ನಿಯಮ. ಇಲ್ಲಿ ಯಾರೂ ಚಿರಸ್ಥಾಯಿಯಾಗಿ ಉಳಿಯಲು ಸಾಧ್ಯವಿಲ್ಲ. ತಲತಲಾಂತರದಿಂದ ಇದು ಹೀಗೆಯೇ ನಡೆದುಕೊಂಡು ಬಂದಿದೆ. ಮುಂದೆಯೂ ಹೀಗೇ ಇರುತ್ತದೆ. ನಟನೆಯಲ್ಲಿ ತೊಡಗಿದ ಒಬ್ಬರು ಉಚ್ಛ್ರಾಯ ಸ್ಥಿತಿಯಲ್ಲಿದ್ದವರು ಕ್ರಮೇಣ ತೆರೆಮರೆಗೆ ಸರಿಯಬಹುದು. ಕಾಲಾಂತರದಲ್ಲಿ ಮತ್ತೆ ಮುಂಚೂಣಿಗೆ ಬರಬಹದು. ನಂತರ ಎಲೆಮರೆಯ ಕಾಯಿಯಾಗಬಹುದು. ಇಲ್ಲವೇ ಮನೆಯಲ್ಲಿ ನಿವೃತ್ತಿಯ ಜೀವನ ಕಳೆಯಬಹುದು. ಖ್ಯಾತಿ– ಪ್ರಚಾರ ಯಾವುದೂ ಶಾಶ್ವತವಲ್ಲ. ನಾನು ನನ್ನ ಕೆಲಸದ ಬಗ್ಗೆ ಮಾತ್ರ ಯೋಚಿಸುತ್ತೇನೆ. ಸೆಲೆಬ್ರಿಟಿಯ ಭ್ರಮೆ ತಲೆಯಲ್ಲಿ ಇಲ್ಲ. ಡಾನ್ಸ್, ಡಬ್ಬಿಂಗ್, ಸಿನಿಮಾ, ಟಿವಿ, ರಂಗಭೂಮಿ ಹೀಗೆ ಸುತ್ತಾಡುವುದು ನಾನು ಒಪ್ಪಿಕೊಂಡ ಕಾಯಕ. ಅದಕ್ಕಾಗಿ ಪ್ರಚಾರದ ಮುಂಚೂಣಿಯಲ್ಲಿ ಇರಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ.

★ *ಸುಬ್ಬಲಕ್ಷ್ಮಿ ಪಾತ್ರದಲ್ಲಿ ನೀವು ಎಷ್ಟು ಪ್ರವೇಶ ಮಾಡಿದ್ದೀರಿ?*

ನಟನೆ ನನಗಂತೂ ಹೊಸತಲ್ಲ. ಆದರೂ ಈ ಪಾತ್ರಕ್ಕೆ ಸಿಕ್ಕಾಪಟ್ಟೆ ತಾಲೀಮು ಮಾಡಿದ್ದೇನೆ. ಬೆಂಗಳೂರು ನಗರದಲ್ಲಿಯೇ ಹುಟ್ಟಿ ಬೆಳೆದ ನನಗೆ ಹಳ್ಳಿಯ ತೀವ್ರ ಅನುಭವ ಆಗಿಲ್ಲ. ಅತ್ಯಂತ ಮುಗ್ಧ ಸುಬ್ಬಲಕ್ಷ್ಮಿಯ ನಡಿಗೆ, ಕೆಲಸ, ನೋಟ, ಭಾವ, ಭಾಷೆ ಎಲ್ಲದರಲ್ಲಿಯೂ ಅದನ್ನು ತೋರಿಸಬೇಕು. ಆಕೆ ಮಾತನಾಡುತ್ತಲೇ ಅಡುಗೆ ಮಾಡುತ್ತಾಳೆ, ತನ್ನ ಪಾಡಿಗೆ ತಾನು ಕೆಲಸ ನಿರ್ವಹಿಸುತ್ತಾಳೆ. ಅಂದರೆ ಇದು ಮನೆಯಲ್ಲಿ ಒಬ್ಬ ಹೆಣ್ಣು ಸಹಜವಾಗಿ ಬದುಕುವ ಪ್ರಕ್ರಿಯೆ. ಅದನ್ನು  ಪಾತ್ರವಾಗಿ ನಾನು ದಕ್ಕಿಸಿಕೊಳ್ಳಬೇಕು. ನಿರ್ದೇಶಕಿ ಸ್ವಪ್ನ ಕೃಷ್ಣ ಅವರ ಕನಸಿನ ಪಾತ್ರ ಅದು. ಅವರ ಕನಸಿನ ನಿರೀಕ್ಷೆಯನ್ನು ಮುಟ್ಟುವ ಮಟ್ಟಿಗೆ ನಾನು ಸುಬ್ಬಲಕ್ಷ್ಮಿಯಾಗಿದ್ದೇನೆ.

★ *ನಟನೆ ವೃತ್ತಿಯಾಗಿ ಬೆಳೆದಿದ್ದು ಹೇಗೆ?*

1991ರಲ್ಲಿ ಒಂದನೇ ತರಗತಿ ಓದುತ್ತಿದ್ದೆ. ಬೇಸಿಗೆ ರಜೆಯಲ್ಲಿ ಎ.ಎಸ್.ಮೂರ್ತಿ ಅವರ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದೆ. ಆ ವರ್ಷ ಪ್ರಭಾಕರ್ ಅವರ 'ಮಹೇಂದ್ರ ವರ್ಮ' ಸಿನಿಮಾದಲ್ಲಿ ನಟಿಸಿದೆ. ನಂತರ ಒಂದಲ್ಲ ಒಂದು ಸಿನಿಮಾ, ನಾಟಕ, ಧಾರಾವಾಹಿಯಲ್ಲಿ ನಟಿಸುತ್ತಲೇ ಬಂದೆ. ಆದರೆ ನಮ್ಮ ಮನೆಯಲ್ಲಿ ಸಂಪೂರ್ಣ ತೊಡಗದಂತೆ ಎಚ್ಚರಿಕೆಯನ್ನು ಕೊಡುತ್ತಿದ್ದರು. ಮೊದಲ ಪ್ರಾಶಸ್ತ್ಯ ಓದಿಗೆ ಕೊಡಬೇಕಿತ್ತು. ಅದರಂತೆ ನಾನು ಓದಿನಲ್ಲೂ ಮುಂದಿದ್ದೆ. ಪದವಿ ಪಡೆಯುವತನಕ ನಟನೆ– ನಾಟ್ಯ ಹವ್ಯಾಸವಾಗಿತ್ತು. ನಂತರ ಅದನ್ನೇ ವೃತ್ತಿ ಎಂದು ತೆಗೆದುಕೊಂಡಿದ್ದೇನೆ. ಇತ್ತೀಚೆಗೆ ಇದರಲ್ಲಿಯೂ ತಾಂತ್ರಿಕವಾಗಿ ಕೆಲಸ ಮಾಡುವ ಆಸಕ್ತಿ ಮೂಡಿದೆ. 'ಅದ್ವಯ' ಎಂಬ ತಂಡವನ್ನು ರಚಿಸಿಕೊಂಡಿದ್ದೇವೆ. ಅದರ ಮೂಲಕ ಪುರಂದರದಾಸರ ಒಂದು ಹಾಡಿನ ಗೀತ ರೂಪಕಕ್ಕೆ ನಿರ್ದೇಶನ ಮಾಡಿದ್ದೇನೆ. ಅದನ್ನು ಅಂತರ್ಜಾಲ, ಯೂ ಟ್ಯೂಬ್‌ನಲ್ಲಿ ಹಾಕಿದ್ದೇವೆ. ಈಗಲೂ ಸೇತುರಾಮ ಅವರ ರಂಗ ತಂಡದಲ್ಲಿ ನಟಿಸುತ್ತಿದ್ದೇನೆ. ಈವರೆಗೆ 420 ಸಿನಿಮಾಗಳಿಗೆ ಡಬ್ಬಿಂಗ್ ಮಾಡಿದ್ದೇನೆ. ಬೇರೆ ಬೇರೆ ನಿರ್ದೇಶಕರ ಜೊತೆ ಕೆಲಸ ಮಾಡುವ ಮೂಲಕ ಭಾಷೆ, ನಟನೆಯನ್ನು ಕಲಿಯಲು ಸಾಧ್ಯವಾಗಿದೆ.

★ *ನಟರಾಗಬೇಕು ಎಂದವರಿಗೆ ನೀವು ಏನು ಹೇಳುತ್ತೀರಿ?*

ನಮ್ಮ ಪೋಷಕರು ನನಗೆ ಎಚ್ಚರಿಸಿದಂತೆಯೇ, 'ಮೊದಲು ಓದು ನಂತರದ ಆಯ್ಕೆ ನಟನೆ' ಎನ್ನುತ್ತೇನೆ. ಜೊತೆಗೆ ಯಾವುದಾದರೂ ಒಂದು ಕೌಶಲ್ಯವನ್ನು ವೃದ್ಧಿಸಿಕೊಳ್ಳಬೇಕು. ಹೆಚ್ಚು ದಿನ ಹುಡುಕಾಟದಲ್ಲಿ ಕಾಲ ಕಳೆಯದೆ ಒಂದು ವರ್ಷದ ಕಾಲ ಮಿತಿಯೊಳಗೆ ಅವಕಾಶಕ್ಕಾಗಿ ಪ್ರಯತ್ನಿಸಬೇಕು. ಸಿಕ್ಕರೆ ಸರಿ, ಇಲ್ಲ ಎಂದರೆ ಜೀವನ ದೊಡ್ಡದಿದೆ. ಓದು, ಅನುಭವಕ್ಕೆ ತಕ್ಕಂತೆ ಯಾವುದರಲ್ಲಾದರೂ ತೊಡಗಬಹುದು ಎನ್ನುತ್ತೇನೆ.

■ ರಾಗು